120(4)

"SATYAVADI" Founded 1917: Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 26] ಮಂಗಳವಾರ 16—10—45 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಆರೋಗ್ಯ, ಆರ್ಥಿಕ, ಮಾನಸಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಾಗಿರುತ್ತವೆ. ಯಶಸ್ಸು ಪ್ರಾಪ್ತಿಯಾಗುವುದು.

ವೃಷಭ— ಆರೋಗ್ಯವು ಉತ್ತಮವಾಗಿರುವದಿಲ್ಲ ಮನೋಸ್ಥಿತಿ ಗಡಿಬಿಡಿಯಾಗಿರುತ್ತದೆ. ಕೈಗೆ ಬಂದ ಹಣವೆಲ್ಲಾ ವ್ಯಯವಾಗುತ್ತದೆ. ವ್ಯವಹಾರದಲ್ಲಿ ಕ್ಷೇಶ ಪ್ರಾಪ್ತಿ.

ಮಿಥುನ— ಆರೋಗ್ಯವು ಚೆನ್ನಾಗಿರುವುದಿಲ್ಲ. ವ್ಯವಹಾರದಲ್ಲೂ ತೊಂದರೆಯುಂಟಾಗುತ್ತದೆ. ಮನಸ್ಸನ್ನು ಚಂಚಲಗಳ ವಳಕ್ಕೀಡು ಮಾಡಬೇಡಿರಿ. ಜಾಗ್ರತೆ.

ಕರ್ಕಾಟಕ— ಆರೋಗ್ಯ ಸ್ಥಿತಿಯು ತೃಪ್ತಿಕರವಾಗಿರುವುದಿಲ್ಲ. ಆದಾಯವೂ ಕಮ್ಮಿ. ವ್ಯಯವಂತೂ ದುಬಾರಿ. ವ್ಯವಹಾರದಲ್ಲಿ ತೊಂದರೆಯು ಸಂಭವ.

ಸಿಂಹ— ದೈಹಿಕ, ಮಾನಸಿಕ, ವ್ಯವಹಾರಿಕ, ಆರ್ಥಿಕ ಸ್ಥಿತಿಗಳು ಅನುಕೂಲವಾಗಿರುತ್ತವೆ. ವ್ಯವಹಾರದಲ್ಲಿ ಯಶೋಪ್ರಾಪ್ತಿಯಾಗುವಂತೆ ಕಾಣುತ್ತದೆ.

ಕನ್ಯಾ— ನಿಮ್ಮ ಸಾಂಪತ್ತಿಕ ಸ್ಥಿತಿಯೂ, ಆರೋಗ್ಯವೂ ಉತ್ತಮವಾಗಿರುತ್ತವೆ ಶತ್ರುಗಳಿಗೆ ಹಾನಿ. ಮನಸ್ಸು ಉಲ್ಲಾಸದಿಂದಿರುತ್ತದೆ.

ತುಲ — ನಿಮ್ಮ ಕಾರ್ಯಗಳು ಪ್ರಗತಿಪರವಾಗಿರುತ್ತವೆ. ಆರೋಗ್ಯವು ಚನ್ನಾಗಿರುತ್ತದೆ. ಧನಾಭಾವವಿರುವುದಿಲ್ಲ. ಮನಸ್ಸು ಹರ್ಷದಿಂದ ತುಂಬಿರುತ್ತದೆ.

ವೃಶ್ಚಿಕ— ಆರ್ಥಿಕವಾಗಿ ಕಷ್ಟವಿರುತ್ತದಾಗಲೀ ಆರೋಗ್ಯವು ಚೆನ್ನಾಗಿರುತ್ತದೆ ಮನಸ್ಸು ಕ್ಲೇಶಕರವಾಗಿರುತ್ತದೆ. ವ್ಯವಹಾರದಲ್ಲಿ ಕಷ್ಟನಿಷ್ಠೂರಗಳ ಸಂಭವವಿದೆ.

ಧನಸ್ಸು— ವ್ಯವಹಾರಗಳು ಸುಗಮವಾಗಿ ನಡೆಯುತ್ತವೆ. ಆರೋಗ್ಯವು ಹೆಚ್ಚು ಉತ್ತಮವಾಗಿರುವುದಿಲ್ಲ. ಕಳ್ಳರ ಕಾಟವೂ ಕಾಣಬರುತ್ತದೆ.

ಮಕರ— ಆರೋಗ್ಯ ಆರ್ಥಿಕ ಸ್ಥಿತಿಗಳು ಜಲೋ ಇರುತ್ತವೆ. ವ್ಯವಹಾರದಲ್ಲಿ ಕೀರ್ತಿಯು ಲಭಿಸುವುದು. ಆದರೆ ಮನೋಚಾಂಚಲ್ಯವನ್ನು ದೂರ ಮಾಡಲು ಯತ್ನಿಸಿರಿ.

ಕುಂಭ— ಆರ್ಥಿಕ ಮಾನಸಿಕ ಸ್ಥಿತಿಗಳೂ ಆರೋಗ್ಯವೂ ಚೆನ್ನಾಗಿರುತ್ತವೆ. ವ್ಯವಹಾರದಲ್ಲಿ ಯಶಸ್ಸು ಲಭಿಸುತ್ತದೆ.

ಮೀನ— ನಿಮಗೆ ಸೋಲಿಲ್ಲ. ಧರ್ಮಮಾರ್ಗದಲ್ಲಿ ನಡೆಯಿರಿ. ಮನೋಚಿಂತನೆ ಇರುತ್ತದೆ. ಆರೋಗ್ಯವು ಚೆನ್ನಾಗಿರುತ್ತದೆ. ಆರ್ಥಿಕವಾಗಿಯೂ ಲಾಭವುಂಟು.

ಬಾಲಕಿಯರಿಗೆ ಉನ್ನತ ವಿದ್ಯೆ ಕಲಿಸಬೇಕು

"ಬಾಲಕಿಯರೆಲ್ಲರಿಗೂ ಉನ್ನತ ವಿದ್ಯೆಯನ್ನು ಕಲಿಸಬೇಕೆಂಬುದರಲ್ಲಿ ಅರ್ಥವಿಲ್ಲ. ಅಸಮಂಜಸವಾಗಿಯೂ, ಅಸಹ್ಯವಾಗಿಯೂ ಬಾಲಕಿಯರು ಬಾಲಕರೊಂದಿಗೆ ಅಬ್ಜೀಬ್ರಾ ಜಾಮೆಟ್ರಿ ಮೊದಲಾದ ಪಾಠ್ಯವಿಶೇಷಗಳಲ್ಲಿ ಪೋಟೀ ಮಾಡುವುದರಿಂದ ಬಾಲಕಿಯರಿಗೆ ಮುಖ್ಯವಾಗಿ ಅವಶ್ಯವಾದ ಭದ್ರ ಲಕ್ಷಣಾವಳಿಗಳು ನಾಶವಾಗುತ್ತವೆ. ಕೆಲವು ಮಂದಿ ಹುಡುಗಿಯರು ಯಾವುದಾದರೂ ವೃತ್ತಿಯನ್ನವಲಂಬಿಸಬೇಕೆಂದು ಕೋರುವ ಸಂದರ್ಭಗಳಿರುತ್ತವೆ. ಅವರಿಗೆ ಪ್ರತ್ಯೇಕ ಕಳಾಶಾಲೆಗಳಿವೆ" ಎಂದು ಬಾಲಕಿಯರ ವಿದ್ಯೆಯನ್ನು ಕುರಿತು ಮದರಾಸು ಸರ್ಕಾರದ ವಿದ್ಯಾಶಾಖೆ ಡೈರಕ್ಟರವರಾದ ಶ್ರೀ ಬಿ. ಬಿ. ಡೇರವರು ತಿಳಿಸಿರುವರು.

.....

ಅಮೇರಿಕನ್ನನ ಸತ್ಯಾಗ್ರಹ

ಅಮೇರಿಕಾದಲ್ಲಿಯ ಒಂದು ಗ್ರಾಮದಲ್ಲಿ ಒಬ್ಬ 70 ವರ್ಷ ವಯಸ್ಸಿನ ವಯೋವೃದ್ಧ ಅವನು ಕಾಗದವನ್ನು ಹೊಲಿಯುವವನು. ವಿಧವೆಯಾಯಿ ಅಂಗಡಿಯನ್ನಿಟ್ಟುಕೊಳ್ಳುವುದಾಗಿ ಗ್ರಾಮಾಧಿಕಾರಿಗಳಿಗೆ ಅರ್ಜಿಹಾಕಿಕೊಂಡನು. ಅವರು ಅರ್ಜಿಯನ್ನು ನಿರಾಕರಿಸಿದರು. ಗ್ರಾಮಸ್ಥರಿಗೆ ನ್ಯಾಯವನ್ನು ಮಾಡಲಾರದೇ ಎಂದು ಅತನು ಸತ್ಯಾಗ್ರಹವನ್ನು ಪ್ರಾರಂಭಿಸಿದನು. ಉಪವಾಸವನ್ನು ಮಾಡುತ್ತಿರುವನು. 26 ದಿನಗಳಾದರೂ ತನ್ನ ಕೆಲಸವನ್ನು ತಾನು ಮಾಡುತ್ತಿರುವನು, ತೂಕದಲ್ಲಿ 28 ಪೌಂಡು ತಗ್ಗಿರುವನು.

ಸೂರತ್ ತಾಲ್ಲೂಕಿನ ಒಂದು ಊರಿನಲ್ಲಿ ಕಾಲರಾ ಹರಡಿತು. ಗ್ರಾಮಸ್ಥರು ಇಂಜಕ್ಷನ್ ಮಾಡಿಕೊಳ್ಳಲು ಹೆದರಿದರು ಇಂಜಕ್ಷನ್ ಮಾಡಿಕೊಂಡ ಸರ್ಟಿಫಿಕೇಟು ಇರವನಿಗೆ ಮಾತ್ರ ಸೀಮೆಎಣ್ಣೆ, ಸಕ್ಕರೆಗಳನ್ನು ಕೊಡುವುದಾಗಿ ಸರ್ಕಾರದವರು ಸಾರಿದಾಗ ಎಲ್ಲರೂ ಇಂಜಕ್ಷನ್ ಮಾಡಿಸಿಕೊಂಡರು.

ವಯಸ್ಸು ಬಂದ ಮಗಳಿಗೆ ಮದುವೆ ಮಾಡಲು ಶಕ್ತಿಯಿಲ್ಲದ ಒಬ್ಬ ತಾಯಿಯೂ ಆಕೆಯ ಮಗಳೂ ಹಗ್ಗದಿಂದ ಕಟ್ಟಿಕೊಂಡು ಕೆರೆಯಲ್ಲಿ ಬಿದ್ದು ಸತ್ತರೆಂಬ ಹೃದಯವಿದ್ರಾವಕ ವಾರ್ತೆಯು ಆಂಧ್ರ ದೇಶದಿಂದ ಬಂದಿದೆ.

ಕಲ್ಕತ್ತಾದಲ್ಲಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ || ಪಾಮರ್ ವ. ಸಿ ಎಸ್. ರವರ ಕಾರೂ ಸೋಲ್ಜರರ ಲಾರಿಯೂ ಡಿಕ್ಕಿ ಹೊಡೆದವು. ಮ್ಯಾಜಿಸ್ಟ್ರೇಲರವರು ಇಳಿದು ಲಾರಿ ನಂಬರನ್ನು ಬರೆದುಕೊಳ್ಳುವುದರಲ್ಲಿದ್ದರು. ಸೋಲ್ಜರರು ಇಳಿದು ಅವಂಗೆ ನಾಲ್ಕು ಏಟು ಬಿಗಿದರು. ಅತನ ದಫೇದಾರನು ಅಡ್ಡವಾಗಿ ಬರಲು ಅವನಿಗೂ ನಾಲ್ಕು ಕೊಟ್ಟರು. ಪೋಲೀಸಿನವರು ದಯ್ಯಾಪ್ತಿ ನಡೆಯುತ್ತಿದೆ.

ದಸರಾ ಎಗ್ಜಿಬಿಷನ್ ಸ್ಟಾಲ್ ಜಿ 15 ಇಲ್ಲಿ ಏನಿದೆ?—

- ದೋಸೆ ಹಿಟ್ಟು ಅರೆಯುವ ಮಿಷನ್ (ಕರೆಂಟ್ ಸಹಾಯದಿಂದ)
- ಬಿ. ಟಿ. ಹೆಚ್. ಎಲೆಕ್ಟ್ರಿಕ್ ಮೋಟಾರುಗಳು 1/4 H. P. to 40 H. P. : 25 cycles.
- ಇತರ ವಿಷನರಿ ಸಾಮಾನುಗಳು.

MYSORE ELECTRIC & Machinery Co.,
Chickpet — Bangalore City

ಪ್ರ. ಪ್ರ. ಸಭೆ

ಮೈಸೂರು, ಅ 16 — ಪ್ರತಿನಿಧಿ ಸಭೆಯ ನಾಲ್ಕನೆಯ ದಿವಸದ ಕಾರ್ಯಕಲಾಪಗಳು ದಿವಾನರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ರಾವ್‌ಬಹದ್ದೂರ್ ರಾವ ಸ್ವಾಮಿಯವರು ದೇಶಾದ್ಯಂತ ವಿದ್ಯಾರ್ಥಿಗಳಿಗೆ ಒತ್ತಾಯದ ವ್ಯಾಯಾಮ ಶಿಕ್ಷಣವನ್ನು ಕೊಟ್ಟು ದೇಹದಾರ್ಢ್ಯರನ್ನಾಗಿ ಮಾಡಬೇಕೆಂದು ಅರಿಕೆ ಮಾಡಿಕೊಂಡರು. ಈ ಅರಿಕೆಯನ್ನು ಸದ್ಯರನೇಕರು ಸಮರ್ಥಿಸಿ ಮಾತಾಡಿದರು.

ಸ್ಕೌಟ್ ಕಮಿಷನರಾದ ಶ್ರೀ ರಾಮರಾಯರು ಸ್ಕೌಟ್ ಪ್ರಚಾರಕ್ಕಾಗಿ ಒಂದ ಲಕ್ಷ ರೂಗಳನ್ನು ಸರ್ಕಾರದ ಯತ್ನಾಲಿಸಬೇಕೆಂದು ಅರಿಕೆಯನ್ನು ಮಾಡಿಕೊಂಡರ.

ಶ್ರೀ ಎಸ್. ಶ್ರೀನಿವಾಸಮೂರ್ತಿಗಳು ಹೆಂಗಸರ ವಿದ್ಯಾಭ್ಯಾಸದ ಕುಂದು ಕೊರತೆಗಳನ್ನು ಅರಿಕೆ ಮಾಡಿಕೊಂಡರು

ಶ್ರೀ ಭೂಪಾಳಂದಮು ಎಳ್ಳಿನ ಮೇಲಿನ ಪ್ರತಿಬಂಧಕದಿಂದ ಆಗಿರುವ ನಷ್ಟವನ್ನು ನಿಲುವಳಿ ಸೂಚನೆಯ ಮೂಲಕ ಚರ್ಚಿಸಿದರು.

ಸಂತೋಷ ಕೂಟ

ಮೈಸೂರು, ಅ 16

ಮೊನ್ನೆಯ ದಿವಸ ಸ್ಥಳೀಯ ಪತ್ರಿಕೋದ್ಯೋಗಿ ಸಂಘದವರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಸ್ಥಾಯಿ ಸಮಿತಿಯವರ ಗೌರವಾರ್ಥವಾಗಿ ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು.

ಮೊನ್ನೆಯ ದಿವಸ ಸಂಜೆ ಪತ್ರಿಕೋದ್ಯೋಗಿ ಸಂಘದ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಆರ್. ರಾಮಯ್ಯನವರು ದಿವಾನರು ಮತ್ತು ಸಚಿವರುಗಳ ಗೌರವಾರ್ಥವಾಗಿ ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಮೊನ್ನೆಯ ದಿವಸ ಸಂಜೆ ದಾಸಾ ಪ್ರಕಾಶ ಕಟ್ಟಡದಲ್ಲಿ ಮಾಡ್ರನ್ ಹಿಂದು ಹೊಟೇಲಿನ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಸಚಿವರುಗಳ ಗೌರವಾರ್ಥವಾಗಿ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಮೊನ್ನೆಯ ದಿವಸ ಸಂಜೆ ದಾಸಾ ಪ್ರಕಾಶ ಕಟ್ಟಡದಲ್ಲಿ ಮಾಡ್ರನ್ ಹಿಂದು ಹೊಟೇಲಿನ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಸಚಿವರುಗಳ ಗೌರವಾರ್ಥವಾಗಿ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಸಿನ್ನೆಯ ದಿವಸ ಸಂಜೆ ಪೌರಸಭಾ ಕಾಂಗ್ರೆಸ್ ಪಕ್ಷದವರು, ಕಾಂಗ್ರೆಸ್ ಕಛೇರಿಯಲ್ಲಿ, ಬೆಂಗಳೂರಿನ ಪೌರಪಭಾಧ್ಯಕ್ಷ ಶ್ರೀ ಗೋಪಾಲಸ್ವಾಮಯ್ಯಂಗಾರ್ಯರ ಗೌರವಾರ್ಥವಾಗಿ ಸತ್ಕಾರಕೂಟವನ್ನೇರ್ಪಡಿಸಿದ್ದರು.

ನಾಲ್ಕರಲ್ಲಿ ಮೂರು ಮೊರೆತವು

ನಾಲ್ಕು ಸ್ವಾತಂತ್ರ್ಯಗಳನ್ನು ಸಾರಿದ ಅಧ್ಯಕ್ಷ ರೂಸ್ವೆಲ್ಟರ ಸಮಾಧಿಯ ಮೇಲಿನ ಮಣ್ಣು ಇನ್ನೂ ಗಟ್ಟಿಯಾಗಿಲ್ಲ. ಅಷ್ಟರಲ್ಲೇ ಮೂರು ಸ್ವಾತಂತ್ರ್ಯಗಳು ದೊರೆತಿವೆ.

ಶಾಂತಿ

ಅರ್ಜಂಟೀನದಲ್ಲಿ ಅಶಾಸ್ತ್ರ !
ಮಲಯದಲ್ಲಿ ಚಳುವಳಿ !
ಜಾವಾದಲ್ಲಿ ಜನ ಜಾಗೃತಿ !
ಸೈಗಾಂನಲ್ಲಿ ಗುಂಡು !
ಈಜಿಪ್ಟ್‌ನಲ್ಲಿ ಗುಜು ಗುಜು !
ಪೆಲೆಸ್ಟೈನಿನಲ್ಲಿ ಹೊಸ ಆಕ್ರಮಣ !
ಸಯಾಂನಲ್ಲಿ ಜೀರ್ಣಾ ವಿರೋಧ !
ಬೆಲ್ಜಿಯಮ್ಮಿನಲ್ಲಿ ಅರಸುತನವೋ
ಪ್ರಜಾ ಪ್ರಭುತ್ವವೋ ಎಂಬ ಪ್ರಶ್ನೆ !
ತುರ್ಕಿ ರಷ್ಯ ಮೈತ್ರಿಯನ್ನು
ಇನ್ನೂ ತಣಿದಿಲ್ಲ.
ಆರಬರ ಟ್ರಿಪೋಲಿಟಾನಾ ಕೇಳಿಕೆ !
ಜಪಾನಿನ ಆಕ್ರಮಣದಲ್ಲಿ
ಮೂವರೋ ಇಬ್ಬರೋ
ಎಂಬ ಪ್ರಶ್ನೆ
ಭಾರತವಿಡೀ ಜ್ವಾಲಾಮುಖಿ !
ಯುದ್ಧ ಮುಗಿಯಿತು. ಕಾಂತಿ ?

ಂ ಂ

ಆಹಾರ

ಭಾರತದಲ್ಲಿ ಕಡಿಮೆ.
ಜರ್ಮನಿಯಲ್ಲಿ ಅಭಾವ.
ಜಪಾನಿನಲ್ಲಿ ಸಾಕಾಗುವುದಿಲ್ಲ.
ಪೂರ್ವದಲ್ಲಿ ಚೀಕಾದಿಟ್ಟಿಲ್ಲ
ಚೀನಾದಲ್ಲಿ ಅವ್ಯವಸ್ಥೆ.
ಗ್ರೀಸಿನಲ್ಲಿ ಹಸಿವು ಅಡಗಲಿಲ್ಲ.
ಬರ್ಮಾ–ಮಲಯಗಳು
ಸ್ಥಿತಕ್ಕೆ ಬಂದಿಲ್ಲ
ಯುದ್ಧ ಮುಗಿಯಿತು. ಹಸಿವು ?

ಂ ಂ

ಅಭಯ

ಜಾವಾದಲ್ಲಿ ಗುಂಡು.
ಸೈಗಾಂನಲ್ಲಿ ಗುಂಡು.
ಗ್ರೀಸಿನಲ್ಲಿ ಒತ್ತಾಯದ ಆಕ್ರಮಣ
ಬರ್ಮಾ ಮಲಯಗಳಲ್ಲಿ ಯಥಾ
ಪೂರ್ವದಂತೆ ರಾಜ್ಯಭಾರ
ಫಾಸಿಸದಲ್ಲಿ ದಂಡ ಹಸ್ತ.
ಯುದ್ಧ ಮುಗಿಯಿತು. ಅಭಯ ?

ವಾರ್ತಾತರಂಗ

ಸಿಂಗಪುರದಲ್ಲಿ ಭಾರತೀಯ ರನ್ನೇಕರು ಯುದ್ಧ ಸಾತಕಿಗಳೆಂಬ ಆರೋಪದಿಂದ ವೇ ಬಂಧಿಸಲ್ಪಟ್ಟಿರುವುದಾಗ ವರದಿಯಾಗಿದೆ.

ಂ ಂ

ಈ ತಿಂಗಳು ಅರ್ಧ ರಾತ್ರಿ ನಂತರ 2 ಗಂಟೆ ಸಮಯದಲ್ಲಿ ಸ್ಟಾಂಡರ್ಡ್ ಟೈಂ 1 ಗಂಟೆ ಹಿಂದಕ್ಕೆ ಇಡಲಾಗುವುದೆಂಬ ಭಾರತ ಸರ್ಕಾರದ ಪ್ರಕಟಣೆ. 1942 ನೇ ಸೆಪ್ಟಂಬರ್ 1 ರಿಂದ 1 ಗಂಟೆ ಮುಂದೆ ಹಾಕಲಾಗಿತ್ತು.

ಂ ಂ

ಜಪಾನಿನ ಹೊಸ ಮಂತ್ರಿಮಂಡಲವು ವೈಕಾರ್ಧರಿಂದ ಅಂಗೀಕೃತವಾಗಿದೆ.

ಂ ಂ

ಮೈಸೂರು ಪ್ರಜಾಪಕ್ಷದ ಅಧಿವೇಶನವು ರಾಜಧಾನಿಯ ಟೌನ್‌ಹಾಲಿನಲ್ಲಿ ತಾ || 16 ರ ಬೆಳಿಗ್ಗೆ ನಡೆಯುವುದಾಗಿ ತಿಳಿಯುಬಂದಿದೆ.

ಂ ಂ

ಬೆಂಗಳೂರಿನಲ್ಲಿ ತಾ || 8 ರಲ್ಲಿ ಮದರಾಸಿದ ಶ್ರೀ ರಾಜಾಜಿಯವರು ಕಾಂಗ್ರೆಸ್ ಕಛೇರಿ ಅವರಣದಲ್ಲಿ, ಕಾಂ || ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮಾಡಿದ ಭಾಷಣದಲ್ಲಿ ಕ್ರಿಪ್ಸ್‌ರಿಂದಲ್ಲಿ ಜನಾಬ್ದಾರಿ ಸರಕಾರದ ಅವಶ್ಯಕತೆ ವಿಷಯವನ್ನು ತಿಳಿಸಿದರು.

ಂ ಂ

ಸ್ವೀಡನ್ನಿನಿಂದ ಕಾಗದ, ಕೈನೇಯಿದ ಬಟ್ಟೆಗಳೂ, ರಿಫ್ರಿಗ್ರೇಟರುಗಳು ಮುಂತಾದುವು ತುಂಬಿರುವ ಹಡಗು ಭಾರತಕ್ಕೆ ಬರುತ್ತಲಿದೆ. ನವೆಂಬರಿನ ಒಳಗಾಗಿ ಬೊಂಬಾಯಿಗೆ ತಲಪುವುದು.

ಂ ಂ

"ಭಾರತ ದೇಶದಲ್ಲಿ ಯಾವುದೇ ಅವಶ್ಯಕ ಕಾರ್ಯವಿರಲಿ, ನಾನು ಜಾವಾಕ್ಕೆ ಭೇಟಿಕೊಡಲು ತಯಾರಾಗಿದ್ದೇನೆ. ದೇಶವಾಪ್ತರಾದರೇನು ! ಸ್ವಾತಂತ್ರ್ಯ ಪ್ರಶ್ನೆಯೆಲ್ಲಾ ಒಂದೇ ! ನನ್ನಿಂದ ಇಂಡೋನೇಷಿಯರಿಗೆ ಕೈಲಾದ ಸೇವೆ ಆವರ ಸ್ವಾತಂತ್ರ್ಯ ಪುನರ್ದಲ್ಲಿ ಅನಶವಿದ್ದರೆ ಕೊಡುವೆನು. ಡಾ || ಸುಕರ್ನೋ ಮುಂತಾದವರು ಸ್ವಾತಂತ್ರ್ಯಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಲಿ ಎಂಬುದಾಗಿ ಡಾ || ಸುಕರ್ನೋ ಅಹ್ವಾನವನ್ನು 'ಕುರಿತು ಪಂಡಿತ್ ನೆಹರೂ ಹೇಳಿಕೆಯಿತ್ತಿದ್ದಾರೆ.

ತಾ. ೧೦—೮—೪೨ನೇ ದಿನ ಯಂದೇಖೂಟಿನ ಮೇಲಿ ನೇಕ ಪೆಸರಿನ ವಿದ್ಯಾರ್ಥಿಗೆ ಪೋಲಿಸ ಕಾನಸ್ಟೇಬಲರ ಹಿಮತುಲ್ಲಾ ಮಿರ್ಜಾ ಇವನು ಹೊಡೆದದ್ದರ ಪರಿಣಾಮವಾಗಿ ಡಿ. ಎಸ್. ಪಿ ಯವರು ಅವನನ್ನು ಸೇವೆಯಿಂದ ತೆಗೆದುಹಾಕಿದರೆಂದು ತಿಳಿಯುತ್ತದೆ.

ಂ ಂ

— ಆಣುಬಾಂಬಿನ ರಹಸ್ಯವನ್ನು ಇತರ ಜನಾಂಗಗಳಿಗೆ ತಿಳಿಸಲಾಗದೆಂದು ಪ್ರೆ || ಟ್ರೂಮನ್ನರು ಹೇಳಿದ್ದಾರೆ

ಂ ಂ

— ಪ್ಯಾಲಿಸ್ಟೈನಿನ ಸಮಸ್ಯೆಯು ಅಖಿಲ ಮುಸ್ಲಿಂ ಪ್ರಪಂಚವನ್ನು ಎಬ್ಬಿಸಬಹುದೆಂದು ಬ್ರಿಟಿಷರ ಕಳವಳ

ಂ ಂ

ಜಪಾನು ವಿಜಯೋತ್ಸವಗಳ ನಂದರ್ಭದಲ್ಲಿ ಕಲ್ಕತ್ತೆಯಲ್ಲಿ ಗಂಡಸಿಗೆ ಒಂದು ಧೋತ್ರ ಹೆಂಗಸಿಗೆ ಒಂದು ಸೀರೆ ಪ್ರತಿಯೊಬ್ಬರಿಗೂ ಒಂದು ಗಾರಡು ಅಕ್ಕಿಯಂತೆ ಸರ್ಕಾರದವರು 18000 ಮಂದಿ ಬಡವರಿಗೆ ಹಂಚಿದರು.

ಮಲೆಯಾಡಲ್ಲಿ ಶರಣಾಗತರಾದ 2 ಲಕ್ಷ ಮುಂದಿ ಜನರು ಈತ್ಪೇಟರ್ ಹತ್ತಿ ಜನರ ವಾಪವಿಲ್ಲದ ಪ್ರಳಕ್ಕೆ ಕಳುಹಿಸಲ್ಪಡುವರು

ಂ ಂ

ಅಲಹಾಬಾದ್ ಆ 7 — ಲಕ್ನೋದಿಂದ ಬಂದಿರುವ ವಾರ್ತೆಯಂತೆ, ಜಪಾನೀಯರು ತಾವು ಮತ್ತೆ ಆತ್ಮಗೌರವ ಪಡೆಯಲು ಸಾಧನವನ್ನು ಸೂಚಿಸಬೇಕೆಂದು, ಪಂ || ಜವಹರಲಾಲರನ್ನು, ಅಮೇರಿಕಾ ಅಸೋಸಿಯೇಟೆಡ್ ಪ್ರಸ್ ಮೂಲಕ ಜಪಾನ್ ಸ್ಯೂಚ ಏಜನ್ಸಿಯವರು ಕೇಳಿ ಟೆಲಿಗ್ರಾಂ ಕಳುಹಿಸಿರುವುದಾಗಿ ತಿಳಿಯುಬಂದಿದೆ.

ಂ ಂ

ಮುಂಬಯಿಯಲ್ಲಿ ಕೇಶನ್ ನಿಯಮಭಂಗ ಮಾಡಿ ಹೆಚ್ಚಿನ ಧಾನ್ಯ ಪಡೆದಿದ್ದಕ್ಕಾಗಿ ಮಿ. ಭಾಯಿಜಂದ್ರ ತ್ರಿಭುವನದಾಸ ಮಿ. ಎಫ್. ಡಿಸಿಲ್ವಾ ಮತ್ತು ಆಂದೇರಿಯ ವಿಸೆಸ್ ಸೇಸಿಲಾ ಡಿಸ್ಸೋಜಾ ಇವರಿಗೆ ಅನುಕ್ರಮವಾಗಿ ೪೦ ರೂ. ಮತ್ತು ೧೦ ರೂ. ಮತ್ತು ೨೫ ರೂ. ದಂಡ ವಿಧಿಸಿದರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ವೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಪುನಗೊಳಿಸುವುದು. ಎಲ್ಲಾ ಸ್ವನುಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಪುಟ್ಟು ಒಂದು ಪಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೪-೦ ಮಾತ್ರ.

ನಮ್ಮ ಸುಪ್ರಸಿದ್ಧ ಆಹಿಕೆಪ್ಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂಜಾ ತಯಾರಾದುದು. ವಿವರಗಳಿಗೆ ಮತ್ತು ಸ್ಟಾಂಪಲ್ಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಬಳಿ. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಮಾಂಸಾಹಾರ — ಶಾಖಾಹಾರ

ಮಾಂಸಾಹಾರಿಯಾದ ಸಿಂಹವು ಒಂದು ಘರ್ಜನೆ ಮಾಡಿ ಕಳಗೆ ಬಿದ್ದಕೊಳ್ಳುವದು. ಆದರೆ ಸಹನೆಯುಳ್ಳ ಎತ್ತು ತಿನ್ನುತ್ತಾ, ನಿದ್ದೆ ಮಾಡುತ್ತಾ ದಿನವೆಲ್ಲ ನಡೆಯುತ್ತಲೇ ಇರುತ್ತದೆ. ಚುರುಕಾದವನೆಂದು ಹೇಳ್ಪಡುವ ಅಮೇರಿಕಾ ದೇಶದವನು ಅನ್ನವನ್ನು ತಿಂದು ಜೀವಿಸುವ ಚೈನಾ ದೇಶದ ಕೂಲಿಯವನೊಂದಿಗೆ ಪೋಟಿಯಲ್ಲಿ ನಿಲ್ಲಲಾರನು. ಸೈನ್ಯಾಧಿಕಾರವು ಪ್ರಬಲವಾಗಿರುವವರಿಗೂ ಮಾಂಸಾಹಾರ ಹೆಚ್ಚಿರುತ್ತದೆ. ಆದರೆ ವಿಜ್ಞಾನ ವಿಕಾಸವನ್ನು ಹೊಂದಿದಂತೆಲ್ಲಾ ಹೋರಾಟವು ನಿಲ್ಲುವುದು. ಆಗ ಶಾಖಾಹಾರಿಗಳು ಹೆಚ್ಚುವರು.

ಸ್ವಾಮಿ ವಿವೇಕಾನಂದ

೪೦ ವರ್ಷಗಳ ತನಕ "ಪಾರ್ಲಿಮೆಂಟ್ ಮೌನ"

ಸಲ್ವತ್ತು ವರ್ಷಗಳ ಕಾಲ ಪಾರ್ಲಿಮೆಂಟು ಮೆಂಬರಾಗಿ, ಒಂದು ಬಾರಿಯಾದರೂ ಪಾರ್ಲಿಮೆಂಟಿನಲ್ಲಿ ತುಟಿಯಲ್ಲಾಡಿಸದೆ ಇದ್ದ ದಾಖಲೆ ಜ || ಫೌಟೆಸ್ಟರ್ ಎಂಬ ಮಹಾಶಯನದು. ಅರವತ್ತು ವರ್ಷ ಕಾಲ ಪಾರ್ಲಿಮೆಂಟು ಸದಸ್ಯನಾಗಿದ್ದ ದಾಖಲೆ ಸರ್ ಚಾರ್ಲಿಸ್ ಒರ್ರೆಲ್ ಎಂಬವನಾದರೂ, ಈ ಸರ್ ಮಹಾಶಯನು ಒಮ್ಮೆ ತನ್ನ ಮೌನವ್ರತವನ್ನು ಭೇದಿಸಿ, ಮನೆಯ ಸ್ತ್ರೀ ಸೇವಕಿಯರು ಕಿಟಕಿಗಳನ್ನು ಸ್ವಚ್ಛ ಪಡಿಸಬಾರದು ಎಂದು ತಂದ ಮಸೂದೆಗೆ ಆಡ್ಡಿಮಾತನಾಡಿದ್ದನಂತೆ. ಪಾರ್ಲಿಮೆಂಟಿನಲ್ಲಿ ಇಂತಹ ಅಲಂಕಾರದ ಮೌಬರರೂ ಇದ್ದಾರೆ. (ಪ್ರ)

ಶರಣಾಗುತ್ತಿರುವ ಜಪಾನಿಗಳು ಸತ್ತ ಗೆಳೆಯರ ಬೆರಳನ್ನು ಕತ್ತರಿಸಿಕೊಂಡು ಹೋಗುತ್ತಾರೆ.

ಆಲ್ಬುಸೀ ಕೇಂದ್ರ, ಆ 7— ವಿಶ್ವರು ಶರಣಾಗತವಾಗುತ್ತಿರುವ ಜಪಾನಿಗಳು ವಿಚಿತ್ರವಾದ ಸಾಮೂಹಿಕಗಳನ್ನು ತಮ್ಮೊಡನೆ ತರುತ್ತಿದ್ದಾರೆ. ಇಬ್ಬರು ತಮ್ಮ ಗೆಳೆಯರ ಕೈ ಬೆರಳು, ಕಾಲಿನ ಹೆಬ್ಬೆಟ್ಟುಗಳನ್ನು ಕತ್ತರಿಸಿ ತಂದರು. ಇದೇನು ವಿಚಿತ್ರವೆಂದು ಕೇಳಲಾಗಿ ಒಬ್ಬ ಜಪಾನೀ ಅಧಿಕಾರಿಯಲ್ಲನನ್ನೂ ಏವರಿಸಿದ. ಜಪಾನಿಗಳಲ್ಲಿ ಸತ್ತ ಸಿಪಾಯಿಯ ಕೈಬೆರಳು ಅಥವಾ ಕಾಲಿನ ಹೆಬ್ಬೆಟ್ಟು ಕತ್ತರಿಸಿ ತಮ್ಮ ದಳಕ್ಕೆ ಕಳುಹಿಸುವುದು ವಾಡಿಕೆ. ಅದನ್ನು ಅವರು ಸುಟ್ಟು, ಅರ್ಧ ಬೂದಿಯಾದ್ದನ್ನು ಆ ಸಿಪಾಯಿ ವಸಿಯವರಿಗೂ, ಇನ್ನರ್ಧವನ್ನು ಟೋಕಿಯೋದಲ್ಲಿ ಒಂದು ದೇವಸ್ಥಾನಕ್ಕೂ ಕಳಿಸುತ್ತಾರೆ. ಈ ದೇವಾಲಯಕ್ಕೆ ವರ್ಷಕ್ಕೆರಡು ಸಾರಿ ಜಪಾನೀ ಚಕ್ರವರ್ತಿ ಹೋಗಿ ಸತ್ತ ವೀರರಿಗೆ ತಮ್ಮ ವಂದನೆಯನ್ನರ್ಪಿಸುತ್ತಾರೆ.

ವರ್ತಮಾನ ಸಂಗ್ರಹ

—ನಲೆಯಾ ಸಮುದ್ರದಲ್ಲಿ ಸಮುದ್ರ ಕಳ್ಳರಕಾಟ ಹೆಚ್ಚಾಗಿದೆ.

—ಹಿಂದೂಸ್ಥಾನ ಸರ್ಕಾರದವರು ಒಂದು ಅಪ್ಪಣೆ ಹೊರಡಿಸಿ ವ್ಯಾಪಾರಸ್ಥರು ಬಟ್ಟೆಯ ಗಂಟುಗಳನ್ನು ಕಟ್ಟುವದಕ್ಕೆ ಕಾಗದವನ್ನು ಉಪಯೋಗಿಸುವದರ ಮೇಲೆ ನಿರ್ಬಂಧವನ್ನು ಹಾಕಿದ್ದಾರೆ.

—ಬ್ರಿಟಿಷ್ ಮತ್ತು ಈಜಿಪ್ಟಿಗೆ 1936 ರಲ್ಲಾಗಿರುವ ಒಪ್ಪಂದದಂತೆ, ಅಣುಬಾಂಬಿನ ರಹಸ್ಯವನ್ನು ಈಜಿಪ್ಟಿಗೂ ತಿಳಿಸಬೇಕೆಂದು ಅಲ್ಲಿಯ ಮಾಜಿ ಮಂತ್ರಿಯವರರ ಅಭಿಪ್ರಾಯ.

—ಜಾವಾದಲ್ಲಿ ಸಾಮೂಹಿಕ ಚಳವಳ ಪ್ರಾರಂಭವಾಗಿದೆ. ದೇಶಭಕ್ತರು ಒಟಾವಿಯಾ ಬಿಟ್ಟು ದ್ವೀಪವನ್ನೆಲ್ಲಾ ಆಕ್ರಮಿಸಿರುವರು.

—ಶ್ರೀ ಒನಹರಲಾಲರ 'ಲೆಟರ್ಸ್ ಆಫ್ ಎ ಫಾದರ್ ಟು ಹಿಸ್ ಡಾಟರ್' ಎಂಬ ಪುಸ್ತಕವನ್ನು ಶಾಲಾ ಪಠ್ಯ ಪುಸ್ತಕವಾಗಿಡಬಹುದೆಂದು ಮಧ್ಯಪ್ರದೇಶ ಸಮಿತಿಯವರು ತೀರ್ಮಾನಿಸಿದಾರೆ.

—ಕಲ್ಕತ್ತಾದಲ್ಲಿ ನಡೆದ ಅಖಿಲಭಾರತ ಸನಾತನೀ ಸಮ್ಮೇಳನದಲ್ಲಿ ದೇಶದ ವಿಭಾಗ ಮಾಡಕೂಡದೆಂದು ಹಿಂದೀರಾಷ್ಟ್ರ ಭಾಷೆಯಾಗಬೇಕೆಂದೂ ತೀರ್ಮಾನಿಸಿದರು.

—ಲಾಹೋರಿನಲ್ಲಿ ತಾ|| 7ರಲ್ಲಿ ಮೌಲಾನಾ ಅಜಾದರು ಮುಸ್ಲಿಮರು ಕಾಂಗ್ರೆಸ್ ಹಾಕಿರುವ ಮಾರ್ಗವನ್ನು ಅನುಸರಿಸಿದರೆ ಅವರಿಗೆ ಶ್ರೇಯಸ್ಕರವೆಂದರು.

—ಬಿಜಾಪುರ ಜಿಲ್ಲಾ ಮ್ಯಾಜಿಸ್ಟ್ರಟರು ಬಾಗಲಕೋಟೆಯ ಮ್ಯುನಿಸಿಪಾಲಿಟಿ ಹದ್ದಿನಲ್ಲಿ ಮೋಟಾರಗಾಡಿಗಳು ಗಂಟೆಗೆ ೧೦ ಮೈಲಿಗಿಂತ ಹೆಚ್ಚಿಗೆ ವೇಗದಿಂದ ನಡೆಯಿಸಲ್ಪಡಕೂಡದೆಂದು ಅಪ್ಪಣೆ ಮಾಡಿದ್ದಾರೆ.

—ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವು ಮುಂದಿನ ಮಾಹೆ 11, 12 ರಲ್ಲಿ ಕೇತ್ಮಾಕಹಳ್ಳಿಯಲ್ಲಿ ಸೇರುವುದು.

AT Opera—
From 10–10–45

ರಂಜಕ, ಟಿ. ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows
From 11-10-45

Tarzan Triumphs

ಅಕ್ಕರ
ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ
ದಿನಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0



ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರನ್ನೇ ಬೀದಿ, ಮೈಸೂರು.

At Ranjit
Humayun
6 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನರ್ಗಿಸ್,, ಷಾ ನವಾಸ್
ಪಾತ್ರ ವಹಿಸಿರುವರು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈ ಸೂ ರು.

ಹ ರಾ ಜು ನೋ ಟೀ ಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಒಂಗ್ಲಾ ಸೈಟುಗಳನ್ನು ತಾರೀಖು 12–9–1945 ನೇ ಹರಾಜು ಇಸ್ತಿಹಾರ್ ನಾಮೆಯ ಷರತ್ತು ಪ್ರಕಾರ ತಾರೀಖು 20–10–1945 ರಿಂದ 23–10–1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ನಾಚೀ ಖೈದಿ

—ಪಂ ॥ ನೆಹರೂರವರು ಜಾವಾಕ್ಕೆ ಹೋಗಲು ವಾಹನ ಸೌಕರ್ಯಕ್ಕಾಗಿ ಭಾರತ ಸರಕಾರವನ್ನು ಕೇಳಿದರು

o o

—ಇಂದೂರಿನ ರಾಜಕೀಯ ಖೈದಿ ಶ್ರೀ ಶಂಬು ದಯಾಳರು 77 ದಿವಸಗಳಿಂದ ಸಂಪೂರ್ಣ ಉಪವಾಸವನ್ನಾಚರಿಸುತ್ತಿರುವರು. ಸ್ಥಿತಿ ಚಿಂತಾಜನಕವಾಗಿದೆ.

ಸ್ವೀಕಾರ — ವಸ್ತು ಪ್ರದರ್ಶನದಲ್ಲಿ ವಿಶೇಷವಾಗಿ ಮಾರಾಟವಾಗುತ್ತಿರುವ ಕಿರಣ್ ಚೂರ್ಣವನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಬೆಲೆ ಒಂದು ಆಣೆ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಕನ್ನಡ ರಂಗಭೂಮಿಯ ಶತಮಾನೋತ್ಸವ

— ಮತ್ತು —

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಯ ವಜ್ರೋತ್ಸವ ಸಮಾರಂಭದ

.... ವಿಷಯ ಸೂಚನೆ ....

೧ ಕನ್ನಡ ರಂಗಭೂಮಿಯ ಶತಮಾನೋತ್ಸವ ಗ್ರಂಥಕ್ಕೆ ವಿಷಯಗಳನ್ನು ಕೊಡಲಿಚ್ಛಿಸುವವರು ಬೆಂಗಳೂರು ಸಿಟಿ, ಕೆಂಪೆಗೌಡ ರಸ್ತೆಯಲ್ಲಿ ಸಾಗರ್ ಟಾಕೀಸ್ ಮುಂದಿರದಲ್ಲಿರುವ "ಕನ್ನಡ ರಂಗಭೂಮಿಯ ಶತಮಾನೋತ್ಸವ ಪ್ರಕಟಣೆಯ ಎಡಿಟೋರಿಯಲ್" ಕಛೇರಿಗೆ ನವೆಂಬರ್ 15 ನೇ ತಾರೀಖಿನೊಳಗೆ ತಲಪುವಂತೆ ಲೇಖನಗಳನ್ನು ಬರೆದು ಕಳುಹಿಸಿಕೊಡುವುದು.

೨ ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಂಸ್ಥೆಯ ವಜ್ರೋತ್ಸವದ ಕೈಪಿಡಿಗೆ ಲೇಖನಗಳನ್ನು ಬರೆಯಲಪೇಕ್ಷಿಸುವವರು ಮೈಸೂರು ಸಿಟಿ ಜಗನ್ಮೋಹನ ಬಂಗ್ಲೆಯು ಎದುರಿಗಿರುವ ಪ್ರಕಟಣಾಧಿಕಾರಿಗಳ ಕಛೇರಿಗೆ ನವೆಂಬರ್ 15 ನೇ ತಾರೀಖಿನೊಳಗಾಗಿ ತಲಪುವಂತೆ ಲೇಖನಗಳನ್ನು ಬರೆದು ಕಳುಹಿಸಿಕೊಡುವುದು.

೩ ಮೇಲ್ಕಂಡ ಉತ್ಸವದ ನಾಟಕ ಪರಿಷತ್ತಿನಲ್ಲಿ ಭಾಗವಹಿಸಲಿಚ್ಛಿಸುವ ಕಲಾಭಿಮಾನಿಗಳು ತಮ್ಮ ವಿಳಾಸ ಸಮೇತ ನವೆಂಬರ್ 15 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೪ ಕನ್ನಡ ರಂಗಭೂಮಿಯ ಶತಮಾನೋತ್ಸವದಲ್ಲಿ ರಂಗೋಪಕರಣಗಳ ಪ್ರದರ್ಶನಕ್ಕೆ ಸಾಮಾನುಗಳನ್ನು ಕಳುಹಿಸಲಪೇಕ್ಷಿಸುವವರು ಡಿಸೆಂಬರ್ 1 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೫ ಕನ್ನಡ ರಂಗಭೂಮಿಯ ಶತಮಾನೋತ್ಸವದ ನಾಟ್ಯಕಲಾ ಸಮ್ಮೇಳನದಲ್ಲಿ ಭಾಗವಹಿಸಲಪೇಕ್ಷಿಸುವ ನೃತ್ಯಕಲಾಭಿಮಾನಿಗಳು ಡಿಸೆಂಬರ್ 1 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೬ ನಟರ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವ ನಟ, ನಟಿಯರು ಡಿಸೆಂಬರ್ 1 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೭ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ನಾಟಕಕಲೋದ್ಯೋಗಿ (Proffessionals) ಸಂಸ್ಥೆಯವರೂ ಮತ್ತು ನಾಟಕಕಲಾವಿಲಾಸಿ (Amateurs) ಸಂಸ್ಥೆಯವರೂ ನವೆಂಬರ್ 15 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೮ ರಂಗಮಂಟಪ ಪ್ರಾಸಾದಕರ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು ಡಿಸೆಂಬರ್ 1 ನೇ ತಾರೀಖಿನೊಳಗಾಗಿ ತಲಪುವಂತೆಯೂ,

೯ ನಾಟಕಕಾರರ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು ಡಿಸೆಂಬರ್ 1 ನೇ ತಾರೀಖಿನೊಳಗಾಗಿ ತಲಪುವಂತೆಯೂ,

ಮೇಲ್ಕಂಡ ಸಮಿತಿಯ ಗೌರವ ಕಾರ್ಯದರ್ಶಿಗಳ ಕಛೇರಿಗೆ ತಮ್ಮ ಅಪೇಕ್ಷಾ ಪತ್ರವನ್ನು ಕಳುಹಿಸಿಕೊಡಬೇಕು.

ಹೆಚ್ಚಿಗೆ ವಿಷಯಗಳನ್ನು ಈ ಕೆಳಕಂಡ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು—

ಕಛೇರಿ—
ಅಶೋಕಾ ರಸ್ತೆ
ಮೈಸೂರು

(ಸಹಿ) ಜಿ. ಆರ್. ರಾಮಯ್ಯ
" ಕೆ. ನಂದೀಬಸಪ್ಪ
ಗೌ॥ ಕಾರ್ಯದರ್ಶಿಗಳು

For Sale

One second hand Empire Typewriter No 1 F ' cape size. Rs. 250/- nett.

Apply to : P. N. Ghose
132 M. S. Paul Choudry Lane
North Bantra Howrah
Post Howrah

ದೀಪದ ಬೆಳಕು ಹೆಚ್ಚಿಸಲು

ಮದರಾಸಿನಲ್ಲಿಯು ಬೀದಿಗಳಲ್ಲಿ ದೀಪಗಳು ಕಡಮೆಯು ಪ್ರಮಾಣದ ವಿದ್ಯುಚ್ಛಕ್ತಿಯ ಉಪಯೋಗದಿಂದ ಹೆಚ್ಚು ಕಾಂತಿ ಮಾಡುವುದಕ್ಕಾಗಿ ಮರ್ಫ್ಯಾವಿ ಪೇಪರ್ ದೀಪಗಳನ್ನು ಉಪಯೋಗಿಸಲು ಯೋಚಿಸಿರುವರು.